## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಟಿ. ಶ್ರೀಕಂಠೇಗೌಡ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 793 |
| ಉತ್ತರಿಸಬೇಕಾದ ದಿನಾಂಕ | : | 11/03/2020 |
| ಉತ್ತರಿಸಬೇಕಾದ ಸಚಿವರು | : | ಶ್ರೀ ವಿ. ಸೋಮಣ್ಣ, ವಸತಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ದೇವರಾಜ ಅರಸು ವಸತಿ ಯೋಜನೆಯಲ್ಲಿ ವಿಶೇಷ ವರ್ಗದ (ಅಂಗವಿಕಲರು, ಹೆಚ್.ಐ.ವಿ. ಸೋಂಕಿತರು, ದೇವದಾಸಿಗಳು ತೃತೀಯ ಲಿಂಗಿಗಳು ಹಾಗೂ ಅಲೆಮಾರಿ) ಜನಾಂಗಕ್ಕೆ ಕಳೆದ 5 ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ; | ರಾಜ್ಯದಲ್ಲಿ ದೇವರಾಜ ಅರಸು ವಸತಿ ಯೋಜನೆಯಡಿ ವಿಶೇಷ ವರ್ಗದ (ವಿಕಲಚೇತನರು, ಹೆಚ್.ಐ.ವಿ. ಸೋಂಕಿತರು, ದೇವದಾಸಿಗಳು ತೃತೀಯ ಲಿಂಗಿಗಳು ಹಾಗೂ ಅಲೆಮಾರಿ, ಇತರೆ) ಜನಾಂಗಕ್ಕೆ ಕಳೆದ 5 ವರ್ಷಗಳಲ್ಲಿ ಒಟ್ಟು 68115 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ಈ ಪೈಕಿ 41207 ಮನೆಗಳು ಪೂರ್ಣ ಗೊಂಡಿದ್ದು, 6020 ಮನೆಗಳು ತಳಪಾಯ ಹಂತದಲ್ಲಿ, 3744 ಮನೆಗಳು ಗೋಡೆ ಹಂತದಲ್ಲಿ, 4206 ಮನೆಗಳು ಛಾವಣಿ ಹಂತದಲ್ಲಿದ್ದು, 10963ಮನೆಗಳು ಪ್ರಾರಂಭವಾಗಬೇಕಿರುತ್ತದೆ. ಉಳಿದಂತೆ 1975 ಫಲಾನುಭವಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಸಹ ಮನೆಗಳನ್ನು ಪ್ರಾರಂಭಿಸಲಾಗದ ಹಿನ್ನೆಲೆಯಲ್ಲಿ ಹಿಂಪಡೆಯಲಾಗಿರುತ್ತದೆ. |
| (ಆ) | ಫಲಾನುಭವಿಗಳಿಗೆ ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಬಿಡುಗಡೆ ಮಾಡಲು ಬಾಕಿ ಇರುವ ಅನುದಾನವೆಷ್ಟು | ಸದರಿ ಫಲಾನುಭವಿಗಳಿಗೆ ಜನವರಿ 2020ರ ಅಂತ್ಯಕ್ಕೆ ಇಂದಿರಾ ಮನೆ ಆಪ್ ಮೂಲಕ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯ ಆಧಾರದ ಮೇಲೆ ರೂ. 628.15 ಕೋಟಿಗಳನ್ನು ಹಾಗೂ ವಿಜಿಲ್ ಆಪ್ ಮೂಲಕ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯ ಆಧಾರದ ಮೇಲೆ ರೂ.1.09 ಕೋಟಿಗಳನ್ನು ಹೀಗೆ ಒಟ್ಟಾರೆಯಾಗಿ ರೂ. 629.24 ಕೋಟಿಗಳನ್ನು ಪಲಾನುಭವಿಗಳ ಖಾತೆಗೆ ಬಿಡುಗಡೆಗೊಳಿಸಲಾಗಿದೆ. ಪ್ರಗತಿಗನುಗುಣವಾಗಿ ಫಲಾನುಭವಿಗಳಿಗೆ ರೂ. 18.96ಕೋಟಿಗಳನ್ನು ಬಿಡುಗಡೆಗೊಳಿಸಲು ಬಾಕಿ ಇರುತ್ತದೆ |
| (ಇ) | ಈ ಯೋಜನೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; | ದೇವರಾಜ ಅರಸು ವಸತಿ ಯೋಜನೆಯಡಿ ಫಲಾನುಭವಿಗಳ ಆಯ್ಕೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯ ಮೂಲಕ ಮಾಡಲಾಗುತ್ತಿದ್ದು ಈ ಯೋಜನೆಯಡಿ ಯಾವುದೇ ಮಧ್ಯವರ್ತಿಗಳ ಹಾವಳಿ ಇರುವ ಬಗ್ಗೆ ವರದಿಯಾಗಿರುವುದಿಲ್ಲ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಈ) | ಬಂದಿದ್ದಲ್ಲಿ, ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಪ್ರಶ್ನೆ ಉದ್ಭವಿಸುವುದಿಲ್ಲ. |
| (ಉ) | ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡುವುದು ಯಾವಾಗ? | ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಣ ಪೋಲಾಗದಂತೆ ತಪ್ಪಿಸಲು ಸರ್ಕಾರವು ದಿನಾಂಕ:16.11.2019 ರಂದು ಆದೇಶ ಹೊರಡಿಸಿ ಈಗಾಗಲೇ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ.<br><br>ಅದರಂತೆ Vigil App ಮೂಲಕ ಪರಿಶೀಲಿಸಿಕೊಂಡು ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳ ಮನೆಗಳ ಪ್ರಗತಿಗೆ ಅನುಗುಣವಾಗಿ ನೇರವಾಗಿ ಫಲಾನುಭವಿಗಳ ಖಾತೆಗೆ ವಾರಕ್ಕೊಮ್ಮೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿದೆ. |

**ವಇ 82 ಹೆಚ್ಎಎಂ 2020**

(ವಿ. ಸೋಮಣ್ಣ)
ವಸತಿ ಸಚಿವರು.